219 (29) : ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಗಡಿ ಗ್ರಾಮ ಕಣಕಟ್ಟೆಯ ಕೆರೆ ದುರಸ್ಥಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ಈ ಕೆರೆಯ ವಿಸ್ತೀರ್ಣ ಎಷ್ಟು; ಇದನ್ನು ದುರಸ್ತಿಗೊಳಿಸಿ ನೀರು ಸಂಗ್ರಹಿಸಿದಲ್ಲಿ ಎಷ್ಟು ಎಕರೆ ಕೃಷಿ ಜಮೀನಿಗೆ ನೀರು ಒದಗಿಸಬಹುದಾಗಿದೆ.

ಇ) ಹೇಮಾವತಿ ನದಿ ನಾಲೆಯ ನೀರಿನ ಸಂಪರ್ಕದ ಮೂಲಕ ಹೊನ್ನವಳ್ಳಿ, ಕಾಮಸಮುದ್ರ ಕೆರೆ ನೀರು ಸಂಗ್ರಹದಿಂದ ಕಣ ಕಟ್ಟೆ ಕೆರೆಗೆ ನೀರು ಸಂಗ್ರಹಿಸುವ ಯೋಜನೆ ಸರ್ಕಾರಕ್ಕಿದೆಯೇ;

ಈ) ಈ ಯೋಜನೆ ಅನುಷ್ಠಾನದ ಕಾಮಗಾರಿಯ ಪ್ರಕ್ರಿಯೆ ಯಾವ ಹಂತದಲ್ಲಿದೆ; ಇದಕ್ಕಾಗಿ ನಿಗದಿಪಡಿಸಿರುವ ಹಣವೆಷ್ಟು; ಯಾವಾಗ ಇದನ್ನು ಪ್ರಾರಂಭಿಸಲಾಗುತ್ತದೆ;

ಉ) ಈ ಯೋಜನೆಯನುಷ್ಠಾನಕ್ಕೆ ನಿಗದಿಪಡಿಸಿರುವ ಹಣವೆಷ್ಟು ಹಾಗೂ ಈ ಕಾಮಗಾರಿಯನ್ನು ಯಾರಿಗೆ ವಹಿಸಲಾಗಿರುತ್ತದೆ; ವಿವರಗಳನ್ನು ಒದಗಿಸುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕಣಕಟ್ಟೆ ಊರ ಮುಂದಿನ ಕೆರೆಯ ದುರಸ್ಥಿಗೆ 1 [illegible]-99ನೇ ಸಾಲಿನ ಆಯವ್ಯಯದಲ್ಲಿ ರೂ. 5.00 ಲಕ್ಷ ಅನುದಾನ ಒದಗಿಸಿರುವ ಮೇರೆಗೆ, ಕೆರೆಯ ಏರಿಯಲ್ಲಿ ಜಂಗಲ್ ತೆಗೆದು, ನಾಲೆಗೆ ಗೈಡ್ ವಾಲ್ ಮತ್ತು ತೂಬಿನ ತೊಟ್ಟಿ ಕೆಲಸವನ್ನು ಕೈಗೊಂಡು 2000ನೇ ಇಸವಿಯಲ್ಲಿ ಪೂರ್ಣಗೊಳಿಸಲಾಗಿದೆ. ಇದಕ್ಕೆ ಆದ ವೆಚ್ಚ ರೂ. 5.15 ಲಕ್ಷ ಕೆರೆಯ 3 ತೂಬಿನ ಗೇಟ್‌ಗಳನ್ನು ರೂ. 1.38 ಲಕ್ಷ ವೆಚ್ಚದಲ್ಲಿ ಅಳವಡಿಸಲಾಗಿರುತ್ತದೆ. ಕೆರೆಯ ಸಮಗ್ರ ಅಭಿವೃದ್ಧಿಗೆ ರೂ. 60 ಲಕ್ಷ ಅವಶ್ಯವಿದೆ. ಅನುದಾನದ ಲಭ್ಯತೆ ಅನುಗುಣವಾಗಿ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಆ) ಈ ಕೆರೆಯ ಜಲಾವೃತ್ತ ಪ್ರದೇಶ 96.17 ಹೆಕ್ಟೇರ್ ಇದ್ದು ಈ ಕೆರೆಯನ್ನು ದುರಸ್ಥಿಗೊಳಿಸಿ ನೀರು ಸಂಗ್ರಹಿಸಿದಲ್ಲಿ ಒಟ್ಟು 156.75 ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸಬಹುದಾಗಿದೆ.

ಇ) ಕಾಮಸಮುದ್ರ ಹಾಗೂ ಕಣಕಟ್ಟೆ ಕೆರೆಗೆ ಹೊನ್ನವಳ್ಳಿ ಕೆರೆಯಿಂದ ನೀರು ಹರಿಸಲು (ಕುಡಿಯುವ ನೀರು ಮಾತ್ರ) ಹೊನ್ನವಳ್ಳಿ ಏತ ನೀರಾವರಿ ಯೋಜನೆಯನ್ನು ಮಂಜೂರು ಮಾಡಲಾಗಿದೆ.

ಈ) ಹೊನ್ನವಳ್ಳಿ ನೀರಾವರಿ ಯೋಜನೆಗೆ ಅನುಮೋದನೆ ನೀಡಿ ಸದರಿ ಯೋಜನೆಯನ್ನು ನಿರ್ವಹಿಸಲು ಪೂರ್ವಾರ್ಹತಾ ಟೆಂಡರುಗಳನ್ನು ಸ್ವೀಕರಿಸಲಾಗಿದ್ದು ಪರಿಶೀಲನೆಯಲ್ಲಿದೆ. 2004-05ನೇ ಸಾಲಿಗೆ ಸದರಿ ಕಾಮಗಾರಿಗೆ ರೂ. 7 ಲಕ್ಷಗಳ ಅನುದಾನ ನಿಗದಿ ಪಡಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೈಗೆತ್ತಿಕೊಳ್ಳಲಾಗುವುದು.

ಉ) ಏತ ನೀರಾವರಿ ಯೋಜನೆಗೆ ರೂ. 20.38 ಕೋಟಿಗಳನ್ನು ಒದಗಿಸಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಮಾಹಿತಿ ಲಭ್ಯವಾಗುವುದು.